# ರಾಮಾಯಣ, ಮಹಾಭಾರತಗಳಲ್ಲಿ ತೀರ್ಥಯಾತ್ರೆ ಮತ್ತು ತೀರ್ಥಕ್ಷೇತ್ರಗಳು

**ಡಾ. ವಿ. ಶ್ರೀಮತಿ**

ನಮ್ಮ ಪರಂಪರೆಯಲ್ಲಿ ತೀರ್ಥಯಾತ್ರೆ ಹಾಗೂ ತೀರ್ಥಕ್ಷೇತ್ರಗಳಿಗಿರುವ ಮಹತ್ವವನ್ನು ಅತ್ಯಂತ ವಿಶದವಾಗಿ ವಿವರಿಸಿ ತಿಳಿಸಿಕೊಡುವ ಗ್ರಂಥಗಳೇ ರಾಮಾಯಣ ಹಾಗೂ ಮಹಾಭಾರತ. ಇವುಗಳಲ್ಲಿ ಬರುವ ಅಂಶಗಳನ್ನು ಸಂಕ್ಷಿಪ್ತವಾಗಿ ನಿರೂಪಿರುವ ಲೇಖಕಿ, ಮೈಸೂರಿನಲ್ಲಿ ಸಂಸ್ಕೃತ ಉಪನ್ಯಾಸಕಿಯಾಗಿದ್ದಾರೆ. ಸಂಗೀತ, ಕಲೆ, ಶಾಸ್ತ್ರ, ಅಧ್ಯಾತ್ಮ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಅವರು ಅನೇಕ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

'ದೇಶ ಸುತ್ತು ಕೋಶ ಓದು' ಎಂಬುದೊಂದು ನಾಣ್ಣುಡಿ. ನಮ್ಮ ಪ್ರಪಂಚಾನುಭವಕ್ಕೆ ಜ್ಞಾನಾಭಿವೃದ್ಧಿಗೆ ಇವೆರಡೂ ಅತ್ಯಗತ್ಯ. ಇಂದು ಆಸಕ್ತಿ, ಕುತೂಹಲ, ಅಭಿರುಚಿ, ಅನಿವಾರ್ಯತೆ ಹೀಗೆ ನಾನಾ ಕಾರಣಗಳಿಂದ ದೇಶ-ವಿದೇಶಗಳನ್ನು ಸುತ್ತುವವರು ಕಂಡು ಬರುತ್ತಾರೆ.

ಸಂಚಾರ ಮಾಡುವುದು ಕೆಲವರಿಗೆ ಹವ್ಯಾಸವಾದರೆ ಮತ್ತೆ ಕೆಲವರಿಗೆ ಜೀವನೋಪಾಯವೂ ಆಗಿರುತ್ತದೆ. ಹಿಂದೆ ಪುಣ್ಯ ಸಂಗ್ರಹಕ್ಕಾಗಿ ಈ ರೀತಿಯ ಸಂಚಾರವಿರುತ್ತಿತ್ತು. ಅದನ್ನು ತೀರ್ಥ ಯಾತ್ರೆ ಎನ್ನಲಾಗುತ್ತಿತ್ತು. ಕಾಶಿ, ರಾಮೇಶ್ವರಕ್ಕೆ ತೀರ್ಥಯಾತ್ರೆ ಹೋಗುವುದು ಎಂಬುದು ನಮ್ಮ ಹಿಂದಿನ ತಲೆಮಾರಿನವರ ಜೀವನದ ಅತ್ಯುಚ್ಚ ಹಂಬಲವೂ ಆಗಿರುತ್ತಿತ್ತು. ಈ ತೀರ್ಥಯಾತ್ರೆ ಎಂಬುದರ ಉಗಮ ಎಂದಿನಿಂದ ಎಂದು ಅರಸುತ್ತಾ ಹೋದರೆ ಆದಿ ಕಾವ್ಯವಾದ ರಾಮಾಯಣದಲ್ಲೇ ಅದನ್ನು ಕಾಣುತ್ತೇವೆ. ಅನಂತರದ ಮಹಾಭಾರತದಲ್ಲಿ ಹಲವಾರು ತೀರ್ಥಯಾತ್ರೆಗಳ ಪ್ರಸ್ತಾಪವಿದೆ.

'ತೀರ್ಥ' ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಅದರಲ್ಲಿ ಋಷಿಗಳು ಸ್ನಾನಮಾಡಿದ ನದಿ, ಸರಸ್ಸು ಎಂಬರ್ಥವೂ ಇದೆ. ಅಂತಹ ನೀರಿನಲ್ಲಿ ನಾವು ಮಿಂದರೆ ಪುಣ್ಯಪ್ರಾಪ್ತಿ ಎಂಬ ನಂಬಿಕೆ ನಮ್ಮ ಸನಾತನ ಧರ್ಮದ್ದು. ಹಾಗಾಗಿ ಅಂತಹ ತೀರ್ಥಕ್ಷೇತ್ರಗಳ ಸಂದರ್ಶನಕ್ಕೆ ಶ್ರದ್ಧಾಭಕ್ತಿಗಳಿಂದ ತೆರಳುತ್ತಿದ್ದರು ನಮ್ಮ ಪೂರ್ವಿಕರು. ಅಂತಹ ಮಹಾತ್ಮರು ನೆಲೆಸಿದ ಪುಣ್ಯಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವುದು ಶ್ರೇಯಸ್ಕರವೆಂದು ಭಾವಿಸುತ್ತಿದ್ದರು.

ಈ ಅರ್ಥದಲ್ಲಿ ಶ್ರೀರಾಮನು ವನವಾಸಕ್ಕೆಂದು ತೆರಳಿದರೂ ಆತನು ಮಾಡಿದ್ದು ತೀರ್ಥಯಾತ್ರೆಯೇ. ತಾನು ಅರಣ್ಯಕ್ಕೆ ತೆರಳಬೇಕಾಗಿರುವ ವಿಷಯವನ್ನು ಸೀತೆಗೆ ತಿಳಿಸುತ್ತಾ –

**ಯಾತೇ ಚ ಮಯಿ ಕಲ್ಯಾಣಿ ವನಂ ಮುನಿನಿಷೇವಿತಮ್ ।**

'ಮುನಿಗಳಿಂದ ಸಂಸೇವ್ಯಮಾನವಾದ ಅರಣ್ಯಕ್ಕೆ ನಾನು ತೆರಳುತ್ತೇನೆ' ಎನ್ನುತ್ತಾನೆ.

ಗಂಗಾತೀರ್ಥದ ಪರಮಪಾವಿತ್ರ್ಯವು ರಾಮಾಯಣದಲ್ಲೂ ಕಂಡುಬರುತ್ತದೆ. ಶ್ರೀರಾಮನು ಸೀತಾ-ಲಕ್ಷ್ಮಣ ಸಹಿತನಾಗಿ ಗಂಗಾನದಿಯನ್ನು ದಾಟುವಾಗ ಸೀತೆಯು ಗಂಗೆಯನ್ನು ಪ್ರಾರ್ಥಿಸುತ್ತಾಳೆ. ಆಕೆಯ ಅನುಗ್ರಹದಿಂದ ವನವಾಸವು ಕ್ಷೇಮಕರವಾಗಿ ಮುಗಿಯಲೆಂದು ಬೇಡುತ್ತಾಳೆ.

**ಯಾನಿ ತ್ವತ್ತೀರವಾಸೀನಿ ದೈವತಾನಿ ವಸಂತಿ ಚ ।**
**ತಾನಿ ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ॥**

'ನಿನ್ನ ತೀರದಲ್ಲಿ ಯಾವ ಯಾವ ದೇವತೆಗಳು ಪ್ರತಿಷ್ಠಿತರಾಗಿರುವರೋ ಆ ಎಲ್ಲ ದೇವತೆಗಳನ್ನೂ ನಾನು ಆರಾಧಿಸುತ್ತೇನೆ. ನಿನ್ನಲ್ಲಿಯೇ ಇರುವ ತೀರ್ಥಗಳನ್ನೂ, ಪುಣ್ಯಕ್ಷೇತ್ರಗಳಲ್ಲಿರುವ ದೇವ ಮಂದಿರಗಳನ್ನೂ ಸಂದರ್ಶಿಸುತ್ತೇನೆ.'



ಇದರಿಂದ ಗಂಗೆಯೂ, ಗಂಗಾತೀರದಲ್ಲಿರುವ ಎಲ್ಲ ಕ್ಷೇತ್ರಗಳೂ ಪರಮ ಪವಿತ್ರವೆಂದು ಅರಿವಾಗುತ್ತದೆ. ಗಂಗಾನದಿಯನ್ನು ದಾಟಿ ಮುಂದೆ ಬಂದು ಗಂಗಾ-ಯಮುನಾ ಸಂಗಮದ ಪುಣ್ಯಕ್ಷೇತ್ರವಾದ ಪ್ರಯಾಗಕ್ಕೆ ತೆರಳಿ ಅಲ್ಲಿ ಭರದ್ವಾಜ ಮುನಿಗಳ ಆಶ್ರಮವನ್ನು ಸಂದರ್ಶಿಸುವರು. ಅಲ್ಲಿಂದ ಚಿತ್ರಕೂಟ ಪರ್ವತವನ್ನು ತಲುಪಿ ಅಲ್ಲಿದ್ದ ವಾಲ್ಮೀಕಿ ಮಹರ್ಷಿಗಳನ್ನು ನಮಸ್ಕರಿಸಿ ಅವರ ಆಶೀರ್ವಾದವನ್ನೂ ಪಡೆಯುವರು.

ಚಿತ್ರಕೂಟದಿಂದ ಹೊರಟ ಶ್ರೀರಾಮನು ಅತ್ರಿ ಮಹರ್ಷಿಗಳ ಆಶ್ರಮಕ್ಕೆ ತೆರಳುತ್ತಾನೆ. ಅವರ ಅನುಗ್ರಹವನ್ನು ಪಡೆದು ಅಲ್ಲಿಂದ ಮುಂದೆ ದಂಡಕಾರಣ್ಯವನ್ನು ಪ್ರವೇಶಿಸುವನು. ಅಲ್ಲಿ ಅನೇಕ

ತಪಸ್ವಿಗಳು ನೆಲೆಸಿದ್ದ ಆಶ್ರಮಮಂಡಲವನ್ನು ಸಂದರ್ಶಿಸುವನು. ಅಲ್ಲಿಂದ ಮುಂದುವರಿದು ಶರಭಂಗ ಮಹರ್ಷಿಗಳ ಆಶ್ರಮವನ್ನು ತಲುಪುವನು. ಅವರ ನಿರ್ದೇಶನದಂತೆ ಸುತೀಕ್ಷ್ಣರ ಆಶ್ರಮಕ್ಕೆ ಬರುವನು. ಅಲ್ಲಿಂದ ಮಾಂಡಕರ್ಣಿ ಮುನಿಯ ಪ್ರಭಾವದಿಂದ ನಿರ್ಮಾಣವಾದ ಪಂಚಾಪ್ಸರತೀರ್ಥಕ್ಕೆ ಆಗಮಿಸುವನು. ಅಲ್ಲಿಂದ ಅಗಸ್ತ್ಯಮಹರ್ಷಿಗಳ ಆಶ್ರಮವನ್ನು ಸಂದರ್ಶಿಸಿದನು. ಅಲ್ಲಿಂದ ಪಂಚವಟಿಯೆಡೆಗೆ ಪ್ರಯಾಣಿಸುವನು.

ಹೀಗೆ ಚಿತ್ರಕೂಟದಿಂದ ಪಂಚವಟಿಯವರೆಗೆ ಶ್ರೀರಾಮನು ಅನೇಕ ಪುಣ್ಯತೀರ್ಥಗಳನ್ನೂ, ಋಷಿಮುನಿಗಳ ತಪೋಭೂಮಿಯನ್ನೂ ಸಂದರ್ಶಿಸುತ್ತಾ ಅವರ ಆಶೀರ್ವಾದವನ್ನು ಪಡೆದು ಸಂಚರಿಸಿದ್ದು ತೀರ್ಥಯಾತ್ರೆಯೇ ಆಗಿದೆ.

ಮಹಾಭಾರತದ ವನಪರ್ವದಲ್ಲಿ ತೀರ್ಥಯಾತ್ರೆಯ ಪುಣ್ಯ ಹಾಗೂ ಪವಿತ್ರತೀರ್ಥಕ್ಷೇತ್ರಗಳ ವಿಸ್ತಾರವಾದ ವರ್ಣನೆಯನ್ನು ಕಾಣಬಹುದು.

ಪಾಂಡವರು ವನವಾಸದಲ್ಲಿರುವಾಗ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸನ್ನಾಚರಿಸುವುದಕ್ಕಾಗಿ ತೆರಳಿರುತ್ತಾನೆ. ಆ ಸಮಯದಲ್ಲಿ ದೇವರ್ಷಿಗಳಾದ ನಾರದರು ಪಾಂಡವರ ಬಳಿಗೆ ಆಗಮಿಸುತ್ತಾರೆ. ಅವರನ್ನು ಯಥೋಚಿತವಾಗಿ ಸತ್ಕರಿಸಿದ ನಂತರ ಯುಧಿಷ್ಠಿರನು ತನ್ನ ಮನಸ್ಸಿನಲ್ಲಿರುವ ಒಂದು ಸಂದೇಹವನ್ನು ಕೇಳುತ್ತಾನೆ. ''ಈ ಪೃಥ್ವಿಯಲ್ಲಿರುವ ಪುಣ್ಯಕ್ಷೇತ್ರಗಳನ್ನೂ, ಪುಣ್ಯತೀರ್ಥಗಳನ್ನೂ ಏಕೆ ಸಂದರ್ಶಿಸಬೇಕು? ಅದರಿಂದ ಯಾವ ಫಲವು ಪ್ರಾಪ್ತವಾಗುತ್ತದೆ?''

ಇದಕ್ಕೆ ಉತ್ತರವಾಗಿ ನಾರದರು ಸುದೀರ್ಘವಾಗಿ ತೀರ್ಥಕ್ಷೇತ್ರಗಳನ್ನು ವರ್ಣಿಸುತ್ತಾರೆ. ಹಿಂದೆ ಭೀಷ್ಮರು ಇದೇ ವಿಷಯವನ್ನು ಪುಲಸ್ತ್ಯ ಮಹರ್ಷಿಗಳಿಂದ ಕೇಳಿ ತಿಳಿದರು ಎಂದು ತಿಳಿಸಿ ಸಮಗ್ರ ಭಾರತದ ತೀರ್ಥಕ್ಷೇತ್ರಗಳ ಪರಿಚಯವನ್ನು ಮಾಡಿಕೊಡುತ್ತಾರೆ. ಆಯಾ ತೀರ್ಥಗಳ ಮಹಿಮೆ, ಅದನ್ನು ಸಂದರ್ಶಿಸುವುದರಿಂದ ದೊರೆಯುವ ಪುಣ್ಯಫಲಗಳನ್ನೂ ವಿವರವಾಗಿ ತಿಳಿಸುತ್ತಾರೆ.

**ಸರ್ವಂ ಕೃತಯುಗೇ ಪುಣ್ಯಂ ತ್ರೇತಾಯಾಂ ಪುಷ್ಕರಂ ಸ್ಮೃತಮ್ ।**
**ದ್ವಾಪರೇಪಿ ಕುರುಕ್ಷೇತ್ರಂ ಗಂಗಾ ಕಲಿಯುಗೇ ಸ್ಮೃತಾ ॥**

ಕೃತಯುಗದಲ್ಲಿ ಸಕಲ ತೀರ್ಥಗಳೂ ಪವಿತ್ರವಾದವು. ತ್ರೇತಾಯುಗದಲ್ಲಿ ಪುಷ್ಕರತೀರ್ಥವು ಸಕಲ ಪಾಪಹರವಾದ ಪುಣ್ಯತೀರ್ಥವೆನಿಸಿಕೊಂಡಿತು. ದ್ವಾಪರಯುಗದಲ್ಲಿ ಕುರುಕ್ಷೇತ್ರವು ಪರಮ ಪವಿತ್ರವಾದ ಪುಣ್ಯತೀರ್ಥವು. ಕಲಿಯುಗದಲ್ಲಿ ಗಂಗಾನದಿಯು ಸರ್ವಪಾಪಹರವಾದ ಪುಣ್ಯನದಿಯಾಗಿರುವುದು.

ಈ ಮಾತು ಇಂದಿಗೂ ಪರಮ ಪೂಜನೀಯವಾಗಿರುವ ಗಂಗಾಮಾತೆಯ ಪಾವಿತ್ರ್ಯಕ್ಕೆ ಸಾಕ್ಷಿಯಾಗಿದೆ. ಹಾಗಾಗಿಯೇ 'ಗಂಗಾಸ್ನಾನಂ ತುಂಗಾ ಪಾನಂ' ಎಂಬ ಮಾತೂ ಪ್ರಚಲಿತವಾಗಿರುವುದು.

ಯಾರು ತೀರ್ಥಯಾತ್ರೆಯನ್ನು ಮಾಡಲು ಅರ್ಹರಲ್ಲ ಎಂಬುದನ್ನೂ ಮಹಾಭಾರತವು ತಿಳಿಸುತ್ತದೆ.

**ನಾವ್ರತೀ ನಾಕೃತಾತ್ಮಾ ಚ ನಾಶುಚಿರ್ನ ಚ ತಸ್ಕರಃ ।**
**ಸ್ನಾತಿ ತೀರ್ಥೇಷು ಕೌರವ್ಯ ನ ಚ ವಕ್ರಮತಿರ್ನರಃ ॥**

ನಿಯಮಾನುಷ್ಠಾನವಿಲ್ಲದವನೂ, ಜಿತೇಂದ್ರಿಯನಲ್ಲದವನೂ, ವೇದಶಾಸ್ತ್ರದಲ್ಲಿ ನಂಬಿಕೆ ಇಲ್ಲದವನೂ, ಕಳ್ಳನೂ ಮತ್ತು ವಕ್ರಬುದ್ಧಿಯುಳ್ಳವನೂ ಪುಣ್ಯತೀರ್ಥಗಳಲ್ಲಿ ಸ್ನಾನ ಮಾಡಲಾರನು ಮತ್ತು ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಲಾರನು.

ಮಹಾಭಾರತದ ಆದಿಪರ್ವದಲ್ಲಿ ತೀರ್ಥಯಾತ್ರೆಯ ಪ್ರಸಂಗವೊಂದು ಕಂಡುಬರುತ್ತದೆ.

ಪಾಂಡವರು ನಾರದ ಮಹರ್ಷಿಗಳ ಸಮ್ಮುಖದಲ್ಲಿ ಒಂದು ಪ್ರತಿಜ್ಞೆಯನ್ನು ಮಾಡಿಕೊಂಡಿರುತ್ತಾರೆ. ಐವರಲ್ಲಿ ಯಾರಾದರೊಬ್ಬರು ದ್ರೌಪದಿಯೊಡನೆ ಏಕಾಂತದಲ್ಲಿರುವಾಗ ಮತ್ತೊಬ್ಬರು ಅವರನ್ನು ನೋಡಿದರೆ ಹಾಗೆ ನೋಡಿದವನು ಹನ್ನೆರಡು ವರ್ಷಗಳ ಕಾಲ ವನವಾಸವನ್ನು ಮಾಡಬೇಕು.

ಒಮ್ಮೆ ಕೆಲವು ಕಳ್ಳರು ಬ್ರಾಹ್ಮಣನೊಬ್ಬನ ಹಸುಗಳನ್ನು ಅಪಹರಿಸಿದರು. ಆ ಬ್ರಾಹ್ಮಣನು ಸಹಾಯವನ್ನಪೇಕ್ಷಿಸಿ ಪಾಂಡವರ ಅರಮನೆಯ ಎದುರು ನಿಂತು ರೋದಿಸತೊಡಗುತ್ತಾನೆ. ಬ್ರಾಹ್ಮಣನ ಆಕ್ರಂದನವನ್ನು ಕೇಳಿದ ಅರ್ಜುನನು ಆತನಿಗೆ ಅಭಯ ನೀಡಿ ಶಸ್ತ್ರಗಳನ್ನು ತೆಗೆದುಕೊಳ್ಳಲು ಸನ್ನದ್ಧನಾಗುತ್ತಾನೆ. ಅವರು ಶಸ್ತ್ರಗಳನ್ನು ಇರಿಸಿದ್ದು ಅಂತಃಪುರದಲ್ಲಿ. ಆ ಸಮಯದಲ್ಲಿ ಯುಧಿಷ್ಠಿರನು ದ್ರೌಪದಿಯೊಡನೆ ಅಂತಃಪುರದಲ್ಲಿದ್ದನು. ಆ ಸಮಯದಲ್ಲಿ ಬೇರೊಬ್ಬರು ಅಲ್ಲಿಗೆ ಪ್ರವೇಶಿಸುವಂತಿರಲಿಲ್ಲ. ಆದರೂ ಪ್ರಜಾಪರಿಪಾಲನೆಯೇ ಮುಖ್ಯ ಕರ್ತವ್ಯ, ಸಂಕಟಕ್ಕೀಡಾದವರ ದುಃಖವನ್ನು ಪರಿಹರಿಸುವುದೇ ಮುಖ್ಯವೆಂದು ಭಾವಿಸಿದ ಅರ್ಜುನನು ಅಂತಃಪುರವನ್ನು ಪ್ರವೇಶಿಸಿ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಕಳ್ಳರನ್ನು ಹಿಂಬಾಲಿಸಿಹೋಗಿ ಬ್ರಾಹ್ಮಣನ ಗೋಸಂಪತ್ತನ್ನು ಹಿಂದಿರುಗಿ ತಂದು ಆತನಿಗೆ ನೀಡುತ್ತಾನೆ.

ನಿಯಮಾನುಸಾರವಾಗಿ ಅರ್ಜುನನು ಯುಧಿಷ್ಠಿರನ ಅಪ್ಪಣೆಯನ್ನು ಪಡೆದು ವನವಾಸಕ್ಕೆ ತೆರಳುತ್ತಾನೆ. ಈ ಸಮಯದಲ್ಲಿ ಆತನು ಅನೇಕ ತೀರ್ಥಗಳನ್ನೂ, ಪುಣ್ಯಕ್ಷೇತ್ರಗಳನ್ನೂ ಸಂದರ್ಶಿಸುತ್ತಾನೆ.

ಗಂಗಾತೀರದ ಹರಿದ್ವಾರಕ್ಕೆ ತೆರಳಿ, ಅಲ್ಲಿಂದ ಹಿಮವತ್ಪರ್ವತದ ತಪ್ಪಲಿಗೆ ಆಗಮಿಸುತ್ತಾನೆ. ಅಲ್ಲಿ ಅಗಸ್ತ್ಯವಟ, ವಸಿಷ್ಠಪರ್ವತ, ಭೃಗುತುಂಗ, ಹಿರಣ್ಯಬಿಂದು ಮುಂತಾದ ಪವಿತ್ರಕ್ಷೇತ್ರಗಳಲ್ಲಿ ತೀರ್ಥಸ್ನಾನ ಮಾಡಿ ಅನೇಕ ದಾನಗಳನ್ನು ನೀಡಿ ಪೂರ್ವದಿಕ್ಕಿನೆಡೆಗೆ ತೆರಳುತ್ತಾನೆ. ನೈಮಿಷಾರಣ್ಯಕ್ಕೆ ತೆರಳುವಾಗ ಮಾರ್ಗದಲ್ಲಿ ಸಿಗುವ ನಂದಾ, ಅಪರನಂದಾ, ಕೌಶಿಕೀ, ಗಯಾ ಮುಂತಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಕಳಿಂಗಕ್ಕೆ ಬಂದು ಅಲ್ಲಿಂದ ಮುಂದೆ ಸಮುದ್ರ ತೀರದಲ್ಲಿರುವ ಅನೇಕ ಪವಿತ್ರ ಸ್ಥಳಗಳನ್ನು ಸಂದರ್ಶಿಸಿ ಮಹೇಂದ್ರ ಪರ್ವತಕ್ಕೆ ಬರುವನು. ಅಲ್ಲಿಂದ ಮಣಿಪುರವನ್ನು ಪ್ರವೇಶಿಸುವನು. ಅಲ್ಲಿಂದ ಹೊರಟು ದಕ್ಷಿಣ ಸಮುದ್ರತೀರದ ಪುಣ್ಯಕ್ಷೇತ್ರಗಳನ್ನು

ಸಂದರ್ಶಿಸಿ ಗೋಕರ್ಣಕ್ಕೆ ಆಗಮಿಸುವನು. ಅಲ್ಲಿಂದ ಪಶ್ಚಿಮ ಸಮುದ್ರ ತೀರಕ್ಕೆ ಬಂದು ಪ್ರಭಾಸತೀರ್ಥದಲ್ಲಿ ಮಿಂದು, ಪುಷ್ಕರ ಕ್ಷೇತ್ರವನ್ನು ಪ್ರವೇಶಿಸುವನು. ಹೀಗೆ ಹನ್ನೆರಡು ವರ್ಷಗಳ ಕಾಲ ಅರ್ಜುನನು ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಪುಣ್ಯ ತೀರ್ಥಗಳಲ್ಲಿ ಮಿಂದು ಪುಣ್ಯಸಂಗ್ರಹವನ್ನು ಮಾಡುತ್ತಾನೆ.



ತೀರ್ಥಕ್ಷೇತ್ರಗಳ ವಿಷಯವಾಗಿ ಯುಧಿಷ್ಠಿರನು ಪುರೋಹಿತರಾದ ಧೌಮ್ಯರನ್ನು ಪ್ರಶ್ನಿಸಿದಾಗ ಅವರು ಭಾರತದ ನಾಲ್ಕೂ ದಿಕ್ಕುಗಳಲ್ಲಿರುವ ಪವಿತ್ರ ಕ್ಷೇತ್ರಗಳ ಬಗ್ಗೆ ವಿಶದವಾಗಿ ತಿಳಿಸುತ್ತಾರೆ:

''ಈ ಪುಣ್ಯಾಶ್ರಮಗಳ ಶ್ರವಣ ಮಾತ್ರದಿಂದಲೇ ದುಃಖದಿಂದ ಪಾರಾಗಬಹುದು. ಆ ಕ್ಷೇತ್ರಗಳಿಗೆ ಪ್ರಯಾಣ ಮಾಡುವುದರಿಂದ ಮಹಾಪುಣ್ಯವು ಪ್ರಾಪ್ತವಾಗುತ್ತದೆ. ಅವುಗಳ ಇತಿಹಾಸವನ್ನು ಶ್ರವಣ ಮಾಡುವುದರಿಂದ ಪ್ರಾಪ್ತವಾಗುವ ಪುಣ್ಯಕ್ಕಿಂತಲೂ ನೂರು ಪಟ್ಟು ಹೆಚ್ಚಿನ ಪುಣ್ಯ ಆ ದಿವ್ಯಾಶ್ರಮಗಳ ದರ್ಶನದಿಂದುಂಟಾಗುತ್ತದೆ'' ಎಂದು ತಿಳಿಸಿ ಮೊದಲಿಗೆ ಪೂರ್ವದಿಕ್ಕಿನಲ್ಲಿರುವ ಪುಣ್ಯಕ್ಷೇತ್ರಗಳ ಪರಿಚಯವನ್ನು ಮಾಡಿಕೊಡುವರು.

ದೇವರ್ಷಿಗಳಿಂದ ಸೇವಿತವಾಗಿರುವ ನೈಮಿಷಾರಣ್ಯದಲ್ಲಿ ಅನೇಕ ಪುಣ್ಯತೀರ್ಥಗಳಿವೆ. ಅದರಲ್ಲಿ ಗೋಮತಿ ನದಿಯು ಸುವಿಖ್ಯಾತವಾಗಿದೆ. ಅದರ ಸಮೀಪದಲ್ಲಿ ಗಯ ಎಂಬ ಶ್ರೇಷ್ಠ ಪರ್ವತವಿರುವುದು. ಅಲ್ಲಿ ಶುಭಪ್ರದವಾದ ಬ್ರಹ್ಮಸರೋವರವಿದೆ. ಗಯಶಿರಕ್ಷೇತ್ರದಲ್ಲಿ ಅಕ್ಷಯವಟವಿರುವುದು. ಅಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡಿದರೆ ಅದು ಅಕ್ಷಯವಾಗುವುದು. ಫಲ್ಗು, ಕೌಶಿಕೀ ಮುಂತಾದ ಪುಣ್ಯತೀರ್ಥಗಳನ್ನು ಅಲ್ಲಿ ಕಾಣಬಹುದು. ಗಂಗಾನದಿಯ ಉಪಸ್ಥಿತಿಯೂ ಅಲ್ಲಿದೆ. ಅಲ್ಲಿಂದ ಮುಂದೆ ಪಾಂಚಾಲದೇಶ. ಉತ್ಪಲಾವನವೆಂಬ ಪವಿತ್ರವನವು ಅಲ್ಲಿರುವುದು. ಅದರ ಸಮೀಪದಲ್ಲಿ ಕನ್ಯಾಕುಬ್ಜವೆಂಬ ಪುಣ್ಯಕ್ಷೇತ್ರವಿರುವುದು. ಇದು ವಿಶ್ವಾಮಿತ್ರರು ಇಂದ್ರನೊಡನೆ ಸೋಮಪಾನ ಮಾಡಿದ ಪವಿತ್ರ ಕ್ಷೇತ್ರ. ಅಲ್ಲಿಂದ ಮುಂದೆ ಗಂಗಾ-ಯಮುನಾ ಸಂಗಮಸ್ಥಾನ. ಇದು ಪ್ರಯಾಗವೆಂದು ಪ್ರಸಿದ್ಧವಾಗಿರುವುದು. ಬ್ರಹ್ಮನು ಯಾಗ ಮಾಡಿದ ಪವಿತ್ರ ಕ್ಷೇತ್ರವಿದು.

ಅಲ್ಲಿಂದ ಮುಂದೆ ಅಗಸ್ತ್ಯ ಮಹರ್ಷಿಗಳು ನೆಲೆಸಿದ್ದ ತಾಪಸಾರಣ್ಯವೆಂದು ಪ್ರಸಿದ್ಧವಾಗಿರುವ ದಿವ್ಯಾಶ್ರಮವನ್ನು ಕಾಣಬಹುದು. ಅದರ ಸಮೀಪದಲ್ಲಿ ಚತುರ್ಮುಖ ಬ್ರಹ್ಮನು ಅನೇಕ ಯಜ್ಞಗಳನ್ನಾಚರಿಸಿದ ಮಹೇಂದ್ರಪರ್ವತ. ಸಮೀಪದಲ್ಲೇ ಭಾಗೀರಥಿ ನದಿ, ಮತಂಗಮಹರ್ಷಿಗಳ ಕೇದಾರಾಶ್ರಮ. ಆ ಆಶ್ರಮದ ಸಮೀಪದಲ್ಲಿ ಕುಂಡೋದವೆಂಬ ಪರ್ವತವಿದೆ. ದೇವವನವೆಂಬ ಪುಣ್ಯಕ್ಷೇತ್ರವೂ ಅಲ್ಲಿರುವುದು.

ದಕ್ಷಿಣ ದಿಕ್ಕಿನಲ್ಲಿ ಅನೇಕ ಪುಣ್ಯಾಶ್ರಮಗಳಿಂದ ಕೂಡಿರುವ, ತಪಸ್ವಿಗಳಿಂದ ಸಂಸೇವ್ಯವಾದ ಗೋದಾವರೀ ನದಿಯಿರುವುದು. ಪಯೋಷ್ಣೀ ಎಂಬ ಮತ್ತೊಂದು ಪರಮ ಪವಿತ್ರ ಪುಣ್ಯತೀರ್ಥವೂ ಅಲ್ಲಿದೆ. ನೃಗ ಮಹಾರಾಜನು ಯಾಗ ಮಾಡಿದ ಪುಣ್ಯಕ್ಷೇತ್ರವಿದು. ಪಾಂಡ್ಯದೇಶದಲ್ಲಿ ಅಗಸ್ತ್ಯತೀರ್ಥ ಮತ್ತು ಪುಣ್ಯಕರವಾದ ವಾರುಣತೀರ್ಥವಿದೆ. ಪವಿತ್ರವಾದ ತಾಮ್ರಪರ್ಣೀ ನದಿಯ ತೀರದಲ್ಲಿ ಅನೇಕ ದೇವತೆಗಳು ತಪಸ್ಸನ್ನಾಚರಿಸಿರುವರು. ಆ ಕ್ಷೇತ್ರದಲ್ಲೇ ಗೋಕರ್ಣತೀರ್ಥವಿರುವುದು. ಅದರ ಸಮೀಪದಲ್ಲಿ ದೇವಗಿರಿ ಹಾಗೂ ವೈಡೂರ್ಯ ಪರ್ವತವಿರುವುದು. ಆ ಪರ್ವತದ ತಪ್ಪಲಿನಲ್ಲಿ ಅಗಸ್ತ್ಯರ ಆಶ್ರಮ. ಸೌರಾಷ್ಟ್ರದೇಶದ ಸಮುದ್ರ ತೀರದಲ್ಲಿ ದೇವತೆಗಳೂ ಆರಾಧಿಸುವ ಚಮಸೋದ್ಭವ ಹಾಗೂ ಪ್ರಭಾಸಗಳೆಂಬ ಪುಣ್ಯತೀರ್ಥಗಳಿರುವುದು. ಸೌರಾಷ್ಟ್ರದೇಶದ ಸಮೀಪದಲ್ಲೇ ದ್ವಾರವತಿ. ಶ್ರೀಕೃಷ್ಣನ ಸಾನ್ನಿಧ್ಯದಿಂದಾಗಿ ಪರಮಪವಿತ್ರವಾಗಿರುವ ದಿವ್ಯಕ್ಷೇತ್ರ.

ಪಶ್ಚಿಮ ದಿಕ್ಕಿನಲ್ಲಿ ಪ್ರಸಿದ್ಧವಾದ ಅವಂತಿದೇಶದಲ್ಲಿ ಪುಣ್ಯಪ್ರದವಾದ ನರ್ಮದಾ ನದಿಯು ಹರಿಯುತ್ತಿರುವುದು. ನರ್ಮದಾ ನದಿಯ ತೀರದಲ್ಲಿ ವಿಶ್ರವಸ ಮುನಿಯ ಆಶ್ರಮ. ಕುಬೇರನ ಜನ್ಮಸ್ಥಳವಿದು. ಪ್ರಸಿದ್ಧವಾದ ವಿಶ್ವಾಮಿತ್ರ ನದಿಯು ಅಲ್ಲಿ ಪ್ರವಹಿಸುತ್ತಿರುವುದು. ಯಯಾತಿಯು ಶಾಪಮುಕ್ತನಾದ ಸ್ಥಳವದು. ಅಲ್ಲೇ ಮೈನಾಕ ಪರ್ವತ, ಚ್ಯವನ ಮಹರ್ಷಿಗಳ ಆಶ್ರಮ. ಅದರ ಸಮೀಪದಲ್ಲಿ ಜಂಬೂಮಾರ್ಗವೆಂಬ ಪುಣ್ಯಾಶ್ರಮ. ತಪಸ್ವಿಗಳಿಗೆ ಪ್ರಿಯವಾದ ಪುಷ್ಕರತೀರ್ಥವು ಅಲ್ಲಿರುವುದು. ಅದು ಅಮಿತ ಫಲದಾಯಕವಾದುದು.

**ಮನಸಾಪ್ಯಭಿಕಾಮಸ್ಯ ಪುಷ್ಕರಾಣಿ ಮನಸ್ವಿನಃ ।**
**ವಿಪ್ರಣಶ್ಯಂತಿ ಪಾಪಾನಿ ನಾಕಪೃಷ್ಠೇ ಚ ಮೋದತೇ ॥**

'ಪುಷ್ಕರತೀರ್ಥಯಾತ್ರೆಯನ್ನು ಮಾಡುತ್ತೇನೆಂದು ಸಂಕಲ್ಪ ಮಾಡಿದ ಮಾತ್ರದಿಂದಲೇ ಮಾನವನು ಪರಿಶುದ್ಧಾತ್ಮನಾಗಿ ಸಕಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ಸ್ವರ್ಗಲೋಕದಲ್ಲೂ ಸಂತುಷ್ಟನಾಗುತ್ತಾನೆ.'

ಉತ್ತರದಿಕ್ಕಿನಲ್ಲಿ ಅನೇಕ ಪುಣ್ಯತೀರ್ಥಗಳನ್ನೊಳಗೊಂಡಿರುವ ಸರಸ್ವತೀ ನದಿಯು ಪ್ರವಹಿಸುತ್ತಿರುವುದು. ಅಲ್ಲಿ ಯಮುನಾ ನದಿಯ ಸಾನ್ನಿಧ್ಯವೂ ಇರುವುದು. ಯಮುನೆಯ ತೀರದಲ್ಲಿ ಪ್ಲಕ್ಷಾವತರಣವೆಂಬ ಪುಣ್ಯತೀರ್ಥವಿರುವುದು. ಅಲ್ಲಿ ಸಾರಸ್ವತವೆಂಬ ವಿಶೇಷ ಯಾಗವು ನಡೆಯುತ್ತದೆ. ಅದರ ಸಮೀಪದಲ್ಲೇ ಅಗ್ನಿಶಿರವೆಂಬ ತೀರ್ಥವಿರುವುದು. ಸರಸ್ವತೀ ನದಿಯ ತೀರದಲ್ಲಿ ವಾಲಖಿಲ್ಯರು

ಅನೇಕ ಯಾಗಗಳನ್ನು ಮಾಡಿರುವರು. ಅದರ ಸಮೀಪ ವೃಷದ್ವತೀ ನದಿಯಿರುವುದು. ಅದರ ಸಮೀಪದಲ್ಲೇ ನರ-ನಾರಾಯಣರು ಅನೇಕ ಯಜ್ಞಗಳನ್ನಾಚರಿಸಿದ ಸ್ಥಳ, ಜಮದಗ್ನಿ ಮಹರ್ಷಿಗಳ ಆಶ್ರಮವಾದ ಪಲಾಶಕ್ಷೇತ್ರವಿದೆ. ಕೈಲಾಸಶಿಖರದಿಂದ ಗಂಗೆಯು ಹೊರಬಂದ ಸ್ಥಳ ಗಂಗಾದ್ವಾರವೆಂದೇ ಪ್ರಸಿದ್ಧವಾಗಿರುವುದು. ಈ ಪವಿತ್ರ ಕ್ಷೇತ್ರದಲ್ಲಿ ಭೃಗುಮಹರ್ಷಿಯು ತಪಸ್ಸು ಮಾಡಿರುವನು. ಅದರ ಸಮೀಪದಲ್ಲೇ ಬದರಿ ಕ್ಷೇತ್ರವಿರುವುದು. ಮಹರ್ಷಿಗಳೂ, ದೇವತೆಗಳೂ ಅಲ್ಲಿ ಶ್ರೀಮನ್ನಾರಾಯಣನನ್ನು ಆರಾಧಿಸುವರು.

ಹೀಗೆ ಧೌಮ್ಯರು ಯುಧಿಷ್ಠಿರನಿಗೆ ಪವಿತ್ರ ಕ್ಷೇತ್ರಗಳನ್ನು ಕುರಿತು ತಿಳಿಸುತ್ತಿರುವ ಸಮಯದಲ್ಲಿ ಪಾಶುಪತಾಸ್ತ್ರವನ್ನು ಪಡೆದ ಅರ್ಜುನನು ಲೋಮಶ ಮಹರ್ಷಿಗಳನ್ನು ಕುರಿತು ತನ್ನ ಸಹೋದರರಿಗೆ ತೀರ್ಥಯಾತ್ರೆಯನ್ನು ಮಾಡಿಸಬೇಕೆಂದು ಕೋರುವನು. ಅದರಂತೆ ಲೋಮಶ ಮಹರ್ಷಿಗಳು ಪಾಂಡವರ ಬಳಿಬಂದು ಅರ್ಜುನನ ವಿಜಯವನ್ನು ತಿಳಿಸಿ ಆತನ ಕೋರಿಕೆಯಂತೆ ಪಾಂಡವರನ್ನು ತೀರ್ಥಯಾತ್ರೆಗೆ ಕರೆದೊಯ್ಯಲು ಬಂದಿರುವುದಾಗಿ ತಿಳಿಸುವರು. ಲೋಮಶ ಮಹರ್ಷಿಗಳು ಈಗಾಗಲೇ ಎರಡು ಬಾರಿ ತೀರ್ಥಯಾತ್ರೆಯನ್ನು ಮಾಡಿರುವರು. ಈಗ ಪಾಂಡವರಿಗಾಗಿ ಮೂರನೆಯ ಬಾರಿ ತೀರ್ಥಯಾತ್ರೆಯನ್ನು ಮಾಡಲು ಸಿದ್ಧರಾಗಿರುವರು.

ಯುಧಿಷ್ಠಿರನು ಮಿತಪರಿವಾರದೊಡನೆ ತೀರ್ಥಯಾತ್ರೆಗೆ ಹೊರಡಲು ಸಿದ್ಧನಾಗುತ್ತಿರುವಾಗ ವ್ಯಾಸಮಹರ್ಷಿಗಳೂ, ದೇವರ್ಷಿಗಳಾದ ನಾರದ-ಪರ್ವತರೂ ಯುಧಿಷ್ಠಿರನನ್ನು ಕಾಣಲು ಕಾಮ್ಯಕವನಕ್ಕೆ ಆಗಮಿಸುವರು. ಯಥೋಚಿತವಾಗಿ ಸತ್ಕಾರವನ್ನು ಸ್ವೀಕರಿಸಿದ ಅವರು ಯುಧಿಷ್ಠಿರನನ್ನುದ್ದೇಶಿಸಿ ಕೆಲವು ಹಿತವಚನಗಳನ್ನು ಹೇಳುವರು.

'ಮನಸ್ಸಿನ ಕಲ್ಮಷವನ್ನು ತೊಳೆದು ತೀರ್ಥಯಾತ್ರೆಯನ್ನು ಮಾಡಬೇಕು. ತ್ರಿಕರಣಶುದ್ಧಿಯಿಂದ ತೀರ್ಥಗಳನ್ನು ಸಂದರ್ಶಿಸಬೇಕು.'

**ತೇ ಯೂಯಂ ಮಾನಸೈಃ ಶುದ್ಧಾ ಶರೀರನಿಯಮವ್ರತೈಃ ।**
**ದೈವಂ ವ್ರತಂ ಸಮಾಸ್ಥಾಯ ಯಥೋಕ್ತಂ ಫಲಮಾಪ್ಸ್ಯಥ ॥**

'ಆಹಾರನಿಯಮ ಮತ್ತು ಉಪವಾಸಾದಿಗಳ ಮೂಲಕ ಮಾನುಷ ವ್ರತವನ್ನಾಚರಿಸಿ ದೇಹವನ್ನು ಶುದ್ಧಿಗೊಳಿಸಿ, ಮನಃಕಲ್ಮಷವನ್ನು ದೂರ ಮಾಡಿ ಶುದ್ಧಾಂತಃಕರಣರಾಗಿ ದೈವವ್ರತವನ್ನು ಅನುಷ್ಠಾನ ಮಾಡಿ ಆತ್ಮವನ್ನು ಶುದ್ಧಿಗೊಳಿಸಿ ನೀವು ತೀರ್ಥಗಳನ್ನು ಸಂದರ್ಶಿಸಿ ಯಥೋಕ್ತವಾದ ಫಲಗಳನ್ನು ಪಡೆಯಿರಿ.'

ಇದು ಅತ್ಯಂತ ಮಹತ್ವದ ಸಂದೇಶವಾಗಿದೆ. ತೀರ್ಥಯಾತ್ರೆ ಮಾಡುವಾಗ ನಮ್ಮ ಮನಸ್ಸು, ದೇಹಗಳೆಲ್ಲವೂ ಪವಿತ್ರವಾಗಿದ್ದಾಗ ಮಾತ್ರ ತೀರ್ಥಯಾತ್ರೆಯ ಸಂಪೂರ್ಣ ಫಲವನ್ನು ನಾವು ಪಡೆಯಬಹುದು. ಇಲ್ಲದಿದ್ದರೆ ಅದು ಕೇವಲ ಪ್ರವಾಸವಾಗಬಹುದಷ್ಟೇ.

ಪಾಂಡವರು ಲೋಮಶಮಹರ್ಷಿಗಳ ಮಾರ್ಗದರ್ಶನದಲ್ಲಿ ಮೊದಲು ನೈಮಿಷಾರಣ್ಯಕ್ಕೆ ತೆರಳಿದರು. ಅಲ್ಲಿಂದ ಪ್ರಯಾಗ ಕ್ಷೇತ್ರಕ್ಕೆ ತೆರಳಿ ಗಂಗಾ-ಯಮುನಾ ನದಿಗಳ ಸಂಗಮಸ್ಥಾನದಲ್ಲಿ ಸ್ನಾನ ಮಾಡಿ ಕೆಲವು ದಿನ ತಪಸ್ಸನ್ನಾಚರಿಸಿದರು. ಅಲ್ಲಿಂದ ಗಯ ಶಿರಕ್ಕಾಗಮಿಸಿ ಅಲ್ಲಿಂದ ಬ್ರಹ್ಮಸರವೆಂಬ ಪುಣ್ಯತೀರ್ಥಕ್ಕಾಗಮಿಸಿದರು. ಅಲ್ಲೇ ಚಾತುರ್ಮಾಸ್ಯ ಯಾಗದೀಕ್ಷೆಯನ್ನು ಕೈಗೊಂಡು ವಿಧಿಯನುಸಾರ ಕರ್ಮಾನುಷ್ಠಾನಗಳನ್ನಾಚರಿಸಿದರು. ಅನಂತರ ಅಗಸ್ತ್ಯಾಶ್ರಮಕ್ಕೆ ಭೇಟಿ ನೀಡಿದರು. ಗಂಗಾನದಿಯಲ್ಲಿ ಮಿಂದು ಅಲ್ಲಿಂದ ಭೃಗುತೀರ್ಥದೆಡೆಗೆ ಆಗಮಿಸಿದರು. ಅಲ್ಲಿಂದ ಸರಸ್ವತೀ ನದಿಯ ತೀರದಲ್ಲಿರುವ ದಧೀಚ ಮಹರ್ಷಿಗಳ ಆಶ್ರಮಕ್ಕಾಗಮಿಸಿದರು. ಮುಂದೆ ನಂದಾ-ಅಪರನಂದಾ ಎಂಬ ಪವಿತ್ರ ನದಿಗಳ ದರ್ಶನವನ್ನು ಮಾಡಿದರು. ಅದರ ಸಮೀಪದಲ್ಲೇ ಇದ್ದ ಹೇಮಕೂಟ ಪರ್ವತವನ್ನು ಸಂದರ್ಶಿಸಿದರು. ಮುಂದೆ ಋಷ್ಯಶೃಂಗರ ಆಶ್ರಮವನ್ನು ಸಂದರ್ಶಿಸಿ ಅಲ್ಲಿಂದ ಕಳಿಂಗ ದೇಶಕ್ಕೆ ಆಗಮಿಸಿದರು. ಅಲ್ಲಿದ್ದ ವೈತರಣೀ ನದಿಯಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನು ನೀಡಿದರು. ಅಲ್ಲಿಂದ ಮಹೇಂದ್ರಪರ್ವತಕ್ಕಾಗಮಿಸಿದರು. ಮುಂದೆ ಪ್ರಭಾಸಕ್ಷೇತ್ರಕ್ಕಾಗಮಿಸಿ ಅಲ್ಲಿಂದ ಮುಂದೆ ಪಯೋಷ್ಣೀ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ನರ್ಮದಾ ನದಿಯ ತೀರದೆಡೆ ಪ್ರಯಾಣಿಸಿದರು. ಅಲ್ಲಿಂದ ಯಮುನಾ ನದಿಯೆಡೆಗೆ ತೆರಳಿದರು. ಸಮಂಗಾ ನದಿಯಲ್ಲಿ ಮಿಂದು ಕನಖಲ ಪರ್ವತಗಳನ್ನು ದಾಟಿ ಉಷ್ಣೀಗಂಗಾನದಿಯಲ್ಲಿ ಸ್ನಾನಮಾಡಿದರು. ಉಶೀರಬೀಜ-ಮೈನಾಕ-ಶ್ವೇತ-ಕಾಲ ಮುಂತಾದ ಪರ್ವತಗಳನ್ನು ದಾಟಿ ಸಪ್ತ ಗಂಗಾಪ್ರವಾಹದೆಡೆ ಆಗಮಿಸಿದರು. ಅಲ್ಲಿಂದ ಗಂಧಮಾದನ ಹಾಗೂ ಹಿಮಾಲಯ ಪರ್ವತದೆಡೆಗೆ ಸಾಗಿದರು. ಅಲ್ಲಿಂದ ಬದರಿಕಾಶ್ರಮಕ್ಕೆ ತೆರಳಿ ವಿಶ್ರಮಿಸಿದರು.

ಇದು ಕೇವಲ ಸಂಚಾರವಾಗಿರಲಿಲ್ಲ. ಆಯಾಯಾ ಪುಣ್ಯ ಕ್ಷೇತ್ರಗಳ, ನದಿ-ನದಗಳ, ಅಲ್ಲಿ ನೆಲೆಸಿದ್ದ ಮಹರ್ಷಿಗಳ, ಅವರು ಆಚರಿಸಿದ ಪುಣ್ಯಕಾರ್ಯಗಳ ಸಂಪೂರ್ಣ ಮಾಹಿತಿಯನ್ನು ಪಡೆದು ಶ್ರದ್ಧಾಭಕ್ತಿಗಳಿಂದ ಅಲ್ಲಲ್ಲಿ ಆಚರಿಸಬೇಕಾದ ನಿಯಮಾನುಷ್ಠಾನಗಳನ್ನು ಆಚರಿಸಿ, ಆಯಾ ಸ್ಥಳಗಳನ್ನು ಗೌರವಿಸಿ ವಿಧಿಪೂರ್ವಕವಾಗಿ ನಡೆಸಿದ ಪುಣ್ಯಕರ ತೀರ್ಥಯಾತ್ರೆ.

ಮಹಾಭಾರತದ ಅನುಶಾಸನಪರ್ವದಲ್ಲಿ ತೀರ್ಥಕ್ಷೇತ್ರಗಳ ಮಹಿಮೆಯನ್ನು ವಿವರಿಸಲಾಗಿದೆ.

ಒಮ್ಮೆ ಯುಧಿಷ್ಠಿರನು ತೀರ್ಥಕ್ಷೇತ್ರಗಳ ಮಹಿಮೆಯನ್ನು ತಿಳಿಯಲು ಬಯಸಿ ಭೀಷ್ಮರನ್ನು ಪ್ರಶ್ನಿಸುತ್ತಾನೆ.

**ತೀರ್ಥಾನಾಂ ದರ್ಶನಂ ಶ್ರೇಯಃ ಸ್ನಾನಂ ಚ ಭರತರ್ಷಭ ।**
**ಶ್ರವಣಂ ಚ ಮಹಾಪ್ರಾಜ್ಞ ಶ್ರೋತುಮಿಚ್ಛಾಮಿ ತತ್ತ್ವತಃ ॥**

'ಮಹಾಪ್ರಾಜ್ಞನೇ! ಪುಣ್ಯತೀರ್ಥಗಳ ದರ್ಶನ, ಅವುಗಳಲ್ಲಿ ಸ್ನಾನ ಮತ್ತು ಅವುಗಳ ಮಾಹಾತ್ಮ್ಯಶ್ರವಣ ಇವುಗಳು ಶ್ರೇಯಸ್ಕರವೆಂದು ಕೇಳಿದ್ದೇನೆ. ಆದ್ದರಿಂದ ಈಗ ಪುಣ್ಯತೀರ್ಥಗಳ ಮಹಿಮೆಯನ್ನು ನಿನ್ನಿಂದ ತಿಳಿಯಲು ಬಯಸಿದ್ದೇನೆ.'

ಪೃಥಿವಿಯಲ್ಲಿರುವ ಎಲ್ಲ ಪುಣ್ಯತೀರ್ಥಗಳ ಮಾಹಾತ್ಮ್ಯವನ್ನು ತಿಳಿಯಲಪೇಕ್ಷಿಸಿದ ಯುಧಿಷ್ಠಿರನಿಗೆ ಹಿಂದೆ ಗೌತಮರು ಅಂಗೀರಸರಿಂದ ತಿಳಿದ ವಿಚಾರವನ್ನು ಭೀಷ್ಮರು ವಿಸ್ತಾರವಾಗಿ ತಿಳಿಸುತ್ತಾರೆ.




ಸಿಂಧೂ ಹಾಗೂ ಕಾಶ್ಮೀರ ಪ್ರಾಂತ್ಯದಲ್ಲಿರುವ ಎಲ್ಲ ನದಿಗಳಲ್ಲಿ ಸ್ನಾನ ಮಾಡುವವನು ಸ್ವರ್ಗವನ್ನು ಪಡೆಯುವನು. ಪುಷ್ಕರ, ಪ್ರಭಾಸ, ನೈಮಿಷಾರಣ್ಯ, ರೇವಿಕಾ, ಇಂದ್ರಮಾರ್ಗ, ಸ್ವರ್ಣಬಿಂದು – ಈ ತೀರ್ಥಗಳಲ್ಲಿ ಸ್ನಾನ ಮಾಡುವವನು ಮರಣಾನಂತರ ದಿವ್ಯ ಶರೀರವನ್ನು ಧರಿಸಿ ವಿಮಾನಾರೂಢನಾಗಿ ಸ್ವರ್ಗಕ್ಕೆ ತೆರಳುತ್ತಾನೆ. ಹೀಗೆ ಹಿರಣ್ಯಬಿಂದು, ಇಂದ್ರತೋಯಾ, ಕರತೋಯಾ, ಗಂಗಾ ದ್ವಾರ, ಕುಶಾವರ್ತ, ಬಿಲ್ವಕ, ಕನಖಲತೀರ್ಥ, ಅಪಾಂಹ್ರದ, ಸಪ್ತ ಗಂಗೆ, ತ್ರಿಗಂಗೆ, ಮಹಾಶ್ರಮ, ಕನ್ಯಾಕೂಪ, ದೇವಿಕಾತೀರ್ಥ, ಸುಂದರಿಕಾಕುಂಡತೀರ್ಥ, ವಿಪಾಶಾ, ಮಹಾಪುರತೀರ್ಥ, ದೇವ ದಾರುವನತೀರ್ಥ, ಶರಸ್ತಂಬತೀರ್ಥ, ದ್ರೋಣಶರ್ಮಪದ, ಮಂದಾ ಕಿನೀ, ಗೋದಾವರಿ, ಕೌಶಿಕೀನದಿ, ಮತಂಗವಾಪಿ ಮುಂತಾಗಿ ಅನೇಕ ತೀರ್ಥಗಳನ್ನೂ, ಅವುಗಳಲ್ಲಿ ಸ್ನಾನ ಮಾಡುವುದರಿಂದ ಉಂಟಾಗುವ ಪುಣ್ಯಫಲಗಳನ್ನೂ ವಿವರಿಸುತ್ತಾರೆ.

ಹಾಗೆಯೇ ಯಾವ ದೇಶಗಳು, ಯಾವ ಪ್ರಾಂತ್ಯಗಳು, ಯಾವ ಆಶ್ರಮಗಳು, ಯಾವ ಪರ್ವತಗಳು ಯಾವ ನದಿಗಳು ಪುಣ್ಯದ ದೃಷ್ಟಿಯಿಂದ ಸರ್ವಶ್ರೇಷ್ಠವಾದುದು ಎಂಬುದನ್ನೂ ಮಹಾಭಾರತವು ತಿಳಿಸುತ್ತದೆ.

**ತೇ ದೇಶಾಸ್ತೇ ಜನಪದಾಸ್ತೇಽಶ್ರಮಾಸ್ತೇ ಚ ಪರ್ವತಾಃ ।**
**ಯೇಷಾಂ ಭಾಗೀರಥೀ ಗಂಗಾ ಮಧ್ಯೇನೈತಿ ಸರಿದ್ವರಾ ॥**

'ಯಾವ ದೇಶಗಳ ಮಧ್ಯದಲ್ಲಿ , ಯಾವ ಪ್ರಾಂತಗಳ ಮಧ್ಯ ದಲ್ಲಿ, ಯಾವ ಆಶ್ರಮಗಳ ಮಧ್ಯದಲ್ಲಿ ಮತ್ತು ಯಾವ ಪರ್ವತಗಳ ಮಧ್ಯದಲ್ಲಿ ಸರಿತ್ತುಗಳಿಗೆ ಶ್ರೇಷ್ಠವಾದ ಗಂಗಾ, ಭಾಗೀರಥೀ ನದಿ ಯು ಹರಿಯುವುದೋ ಅಂತಹ ದೇಶ-ಪ್ರಾಂತ- ಆಶ್ರಮ ಮತ್ತು ಪರ್ವತಗಳು ಪುಣ್ಯದ ದೃಷ್ಟಿಯಿಂದ ಉತ್ಕೃಷ್ಟವಾದವು.'

**ತಪಸಾ ಬ್ರಹ್ಮಚರ್ಯೇಣ ಯಜ್ಞೈಸ್ತ್ಯಾಗೇನ ವಾ ಪುನಃ ।**
**ಗತಿಂ ತಾಂ ನ ಲಭೇಜ್ಜಂತುರ್ಗಂಗಾಂ ಸಂಸೇವ್ಯ ಯಾಂ ಲಭೇತ್ ॥**

'ಮನುಷ್ಯನು ಗಂಗೆಯನ್ನು ಸೇವಿಸುವುದರಿಂದ ಯಾವ ಶ್ರೇಷ್ಠ ವಾದ ಗತಿಯನ್ನು ಹೊಂದುವನೋ; ಅಂತಹ ಉತ್ತಮ ಗತಿ ಯನ್ನು ತಪಸ್ಸಿನಿಂದಾಗಲೀ, ಬ್ರಹ್ಮಚರ್ಯದಿಂದಾಗಲೀ, ಯಜ್ಞ ಗಳಿಂದಾಗಲೀ, ಎಲ್ಲವನ್ನು ತ್ಯಾಗ ಮಾಡುವುದರಿಂದಾಗಲೀ ಪಡೆಯಲಾರನು.'

ಇಂದಿಗೂ ಗಂಗೆ ನಮಗೆ ಪರಮ ಪೂಜನೀಯಳು. ಅತ್ಯಂತ ಪವಿತ್ರಳೂ, ಜಗತ್ತಿನ ಪಾಪವನ್ನು ನಿರ್ಮೂಲನಗೊಳಿಸುವವಳೂ ಆದ ಈ ಗಂಗಾಮಾತೆಯು ಯುಗಯುಗಾಂತರಗಳಿಂದಲೂ ಮಾನವಕುಲಕ್ಕೆ ಶ್ರೇಯಸ್ಸನ್ನುಂಟುಮಾಡುತ್ತಿರುವಳು. ಭಗೀರಥನು ಸತತ ಪ್ರಯತ್ನದಿಂದ ದೇವಲೋಕದ ಗಂಗೆಯನ್ನು ಭೂಲೋಕಕ್ಕೆ ತಂದು ಸಕಲ ಜೀವರಾಶಿಗೂ ಮಹದುಪಕಾರವನ್ನೇ ಮಾಡಿರು ವನು.

ಮಹಾಭಾರತದ ಉದ್ಯೋಗಪರ್ವದಲ್ಲಿ ಮತ್ತೊಂದು ತೀರ್ಥ ಯಾತ್ರೆಯ ಪ್ರಸ್ತಾಪವಿದೆ.

ಮಹಾಭಾರತ ಯುದ್ಧ ನಿಶ್ಚಯವಾಗಿದೆ. ಆ ಸಮಯದಲ್ಲಿ ಬಲರಾಮನು ಕೌರವರ ನಾಶವಾಗುವುದೆಂದು ಅರಿತಿರುತ್ತಾನೆ. ದುರ್ಯೋಧನನಿಗೆ ಸಹಾಯ ಮಾಡಬೇಕೆಂಬ ಅಪೇಕ್ಷೆಯಿದ್ದರೂ ಶ್ರೀಕೃಷ್ಣನಿಗೆ ವಿರುದ್ಧವಾಗಿ ದುರ್ಯೋಧನನ ಪಕ್ಷವನ್ನು ಸೇರಲು ಬಯಸುವುದಿಲ್ಲ. ಆಗ ಯುಧಿಷ್ಠಿರನನ್ನುದ್ದೇಶಿಸಿ ಹೇಳುತ್ತಾನೆ- ''ನನಗೆ ಗದಾಯುದ್ಧ ವಿಶಾರದರಾದ ಭೀಮ-ದುರ್ಯೋಧನ ರಿಬ್ಬರೂ ಪ್ರಿಯ ಶಿಷ್ಯರು. ಅವರಿಬ್ಬರ ಮೇಲೂ ನನಗೆ ಸಮಾನ ವಾದ ಪ್ರೀತಿ ವಿಶ್ವಾಸಗಳಿವೆ. ಹಾಗಾಗಿ ಯಾವ ಪಕ್ಷಕ್ಕೂ ನಾನು ಸೇರಲು ಬಯಸುವುದಿಲ್ಲ. ಯುದ್ಧವನ್ನು ನೋಡುತ್ತಾ ಇಲ್ಲೇ ಇರಲೂ ಸಾಧ್ಯವಿಲ್ಲ. ಆದ್ದರಿಂದ ಸರಸ್ವತೀ ನದಿಯ ತೀರದಲ್ಲಿರುವ ತೀರ್ಥಗಳನ್ನು ಸಂದರ್ಶಿಸಲು ಮತ್ತು ಪುಣ್ಯತೀರ್ಥಗಳ ಸೇವೆ ಮಾಡಲು ಹೊರಟುಹೋಗುತ್ತೇನೆ'' ಎಂದು ತಿಳಿಸಿ ತೀರ್ಥ ಯಾತ್ರೆಗೆ ತೆರಳುವನು.

ಮಹಾಭಾರತದ ಮೌಸಲ ಪರ್ವದಲ್ಲೂ ತೀರ್ಥಯಾತ್ರೆಯ ಪ್ರಸ್ತಾಪವನ್ನು ಕಾಣಬಹುದು.

ಮಹಾಭಾರತ ಯುದ್ಧ ಮುಗಿದು ಗಾಂಧಾರಿಯ ಶಾಪದಂತೆ ಸಮಸ್ತ ಯಾದವಕುಲ ವಿನಾಶವಾಗುವ ಸಮಯ ಸನ್ನಿಹಿತವಾಗಿತ್ತು. ಆ ಸಮಯದಲ್ಲಿ ಅನೇಕ ಅಶುಭ ಸೂಚನೆಗಳುಂಟಾಗುತ್ತಿದ್ದವು. ಕಾಲದ ವೈಪರೀತ್ಯವು ಸಮೀಪಿಸುತ್ತಿರುವುದನ್ನರಿತ ಶ್ರೀಕೃಷ್ಣನು ವೃಷ್ಣಿವೀರರನ್ನುದ್ದೇಶಿಸಿ, ''ಬಂಧುಬಾಂಧವರನ್ನು ಕಳೆದುಕೊಂಡು ಪುತ್ರಶೋಕದಿಂದ ಪರಿತಪಿಸುತ್ತಿದ್ದ ಗಾಂಧಾರಿಯು ಹೇಳಿದ ಮಾತು ನಿಜವಾಗುವ ಸಮಯ ಬಂದಿರುವುದು. ಹಾಗಾಗಿ ಯಾದವ ರೆಲ್ಲರೂ ತೀರ್ಥಯಾತ್ರೆಗೆ ಹೊರಡಬೇಕು'' ಎಂದು ಆಜ್ಞಾಪಿಸಿ ದನು. ಅದರಂತೆ ರಾಜಭಟರು ''ತೀರ್ಥಯಾತ್ರೆಯ ಸಲುವಾಗಿ ಸಮುದ್ರದ ಬಳಿಗೆ ಹೋಗುವುದು ನಿಮ್ಮೆಲ್ಲರ ಕರ್ತವ್ಯವಾಗಿದೆ'' ಎಂದು ಸಾರಿದರು. ಆ ಸಮಯದಲ್ಲಿ ಶ್ರೀಕೃಷ್ಣನ ಚಕ್ರ-ರಥ ಮುಂತಾದುವೆಲ್ಲವೂ ದೇವಲೋಕಕ್ಕೆ ಹೊರಟುಹೋಯಿತು.

**ತಾಲಃ ಸುಪರ್ಣಶ್ಚ ಮಹಾಧ್ವಜೌ ತೌ**
**ಸುಪೂಜಿತೌ ರಾಮಜನಾರ್ದನಾಭ್ಯಾಮ್ ।**
**ಉಚ್ಚೈರ್ಜಹ್ರುರಪ್ಸರಸೋ ದಿವಾನಿಶಂ**
**ವಾಚಶ್ಚೋಚುರ್ಗಮ್ಯತಾಂ ತೀರ್ಥಯಾತ್ರಾ ॥**

'ಬಲರಾಮ ಮತ್ತು ಶ್ರೀಕೃಷ್ಣರಿಂದ ಅನುದಿನವೂ ಚೆನ್ನಾಗಿ ಪೂಜಿಸಲ್ಪಡುತ್ತಿದ್ದ; ತಾಲ ಮತ್ತು ಗರುಡನ ಚಿಹ್ನೆಗಳಿದ್ದ ಮಹಾ ಧ್ವಜಗಳನ್ನು ಅಪ್ಸರೆಯರು ಮೇಲಕ್ಕೆ ಹಾರಿಸಿಕೊಂಡು ಹೋಗುತ್ತಾ ತೀರ್ಥಯಾತ್ರೆಗೆ ಹೋಗಿರಿ...ತೀರ್ಥಯಾತ್ರೆಗೆ ಈಗಲೇ ಪ್ರಯಾಣ

ಮಾಡಿರಿ ಎಂಬ ಮಾತನ್ನು ಹಗಲೂ-ರಾತ್ರಿ ಪದೇ ಪದೇ ಗಟ್ಟಿಯಾಗಿ ಹೇಳುತ್ತಿದ್ದರು.'

ಅಂಧಕ-ವೃಷ್ಣಿಗಳು ನಾನಾಬಗೆಯ ಭಕ್ಷ್ಯ-ಭೋಜ್ಯ-ಪೇಯಗಳನ್ನು ಸಿದ್ಧಪಡಿಸಿಕೊಂಡು ರಥ-ಆನೆ-ಕುದುರೆ ಮುಂತಾದ ವಾಹನಗಳ ಮೂಲಕ ತೀರ್ಥಯಾತ್ರೆಗೆ ಹೊರಟು ಪ್ರಭಾಸ ಕ್ಷೇತ್ರಕ್ಕೆ ತಲುಪಿದರು. ದುರದೃಷ್ಟವಶಾತ್; ಶಾಪದ ಕಾರಣದಿಂದಾಗಿ ಅವರೆಲ್ಲರೂ ಪ್ರಮತ್ತರಾಗಿ ಅಲ್ಲಿ ಪರಸ್ಪರ ಕಾದಾಡಿ ಅಸುನೀಗಿದರು.

ನದಿಗಳು ಜನಜೀವನದ ಅವಿಭಾಜ್ಯ ಅಂಗವಾಗಿವೆ. ನಾಗರಿಕತೆಯು ಉದಯವಾಗಿರುವುದೇ ನದೀತೀರದಲ್ಲಿ. ವೇದ-ಪುರಾಣಗಳಲ್ಲೇ ಪ್ರಕೃತಿದತ್ತವಾದ ನದಿಗಳ ಮಹಿಮೆಯನ್ನು ಕಾಣಬಹುದು. ಪದ್ಮಪುರಾಣವು,

**ವಿಶ್ವಸ್ಯ ಮಾತರಸ್ಸರ್ವಾಃ ಸರ್ವಾಶ್ಚೈವ ಮಹಾಫಲಾಃ ।**
**ತಥಾ ನದ್ಯಃ ಸ್ವಪ್ರಕಾಶಾಃ ಶತಶೋಥ ಸಹಸ್ರಶಃ ॥**

—— ಎಂದು ನದಿಯನ್ನು ಜಗತ್ತಿನ ಮಾತೆ ಎಂದಿದೆ.

ಬ್ರಹ್ಮಾಂಡಪುರಾಣವು-

**ತಾಸ್ತು ನದ್ಯಃ ಸರಸ್ವತ್ಯಃ ಸರ್ವಾ ಗಂಗಾಸ್ಸಮುದ್ರಗಾಃ ।**
**ವಿಶ್ವಸ್ಯ ಮಾತರಸ್ಸರ್ವಾಃ ಜಗತ್ಪಾಪಹರಾಃ ಸ್ಮೃತಾಃ ॥**

- ಎಂದು ಜಗತ್ತಿನ ಪಾಪವನ್ನು ನಿವಾರಿಸುವ ಶ್ರೇಷ್ಠತೆಯುಳ್ಳದ್ದು ಎಂದು ವರ್ಣಿಸಿದೆ.

ಆದ್ದರಿಂದ ಇಂತಹ ಪವಿತ್ರ ನದಿಗಳನ್ನು ಸಂದರ್ಶಿಸಿ, ಅವುಗಳಲ್ಲಿ ಮಿಂದು ನಮ್ಮ ಪಾಪಗಳನ್ನು ನಿವಾರಿಸಿಕೊಂಡು, ಪುಣ್ಯಗಳಿಸಲು ತೀರ್ಥಯಾತ್ರೆಗೆ ಹೋಗುವುದು ನಮ್ಮ ಸನಾತನ ಸಂಪ್ರದಾಯದ ಅತ್ಯಂತ ನಂಬಿಕೆಯ ಶ್ರದ್ಧಾಕಾರ್ಯವಾಗಿದೆ.

ಮಹರ್ಷಿಗಳು ತಪಸ್ಸು ಹಾಗೂ ಯಜ್ಞಗಳನ್ನಾಚರಿಸಿದ ಪುಣ್ಯಸ್ಥಳದಲ್ಲಿ ಅವರ ಪ್ರಭಾವವು ಅನೇಕ ಕಾಲ ಜಾಗೃತವಾಗಿರುತ್ತದೆ. ಅದಕ್ಕಾಗಿಯೇ ಅಂತಹ ಕ್ಷೇತ್ರಗಳನ್ನು ಸಂದರ್ಶಿಸುವುದು ಇಂದಿಗೂ ಪುಣ್ಯಪ್ರದವಾದುದು.

**'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ।'** ಎಂಬ ಮಾತಿನಂತೆ ಮಹಾಭಾರತದಲ್ಲಿ ವರ್ಣಿತವಾಗದ ವಿಷಯಗಳೇ ಇಲ್ಲವೆನ್ನಬಹುದು. ಸಮಗ್ರ ಭಾರತದ ತೀರ್ಥಕ್ಷೇತ್ರಗಳನ್ನು ವ್ಯಾಸಮಹರ್ಷಿಗಳು ಬಣ್ಣಿಸಿರುವ ರೀತಿ ಅವರ ಭೌಗೋಳಿಕ ಜ್ಞಾನದ ಪರಾಕಾಷ್ಠೆಯೆನ್ನಬಹುದು. ಅಂದು ವರ್ಣಿಸಿದ ಹಲವಾರು ತೀರ್ಥಕ್ಷೇತ್ರಗಳನ್ನು ಇಂದು ಅದೇ ಹೆಸರಿನಲ್ಲಿ ಕಾಣಲಾಗದಿದ್ದರೂ ಕೆಲವು ನದಿಗಳು, ಪ್ರದೇಶಗಳು ಅದೇ ಹೆಸರಿನಲ್ಲಿವೆ. ಅವುಗಳ ಮಹಿಮೆಯು ಭಾರತೀಯರ ಮನಸ್ಸಿನಲ್ಲಿ ಅಚ್ಚಳಿಯದಂತೆ ಭದ್ರವಾಗಿ ನೆಲೆಯೂರಿದೆ. ಹಾಗಾಗಿ ತೀರ್ಥಯಾತ್ರೆ ಎಂದೊಡನೆ ಇಂದಿಗೂ ಮನಸ್ಸು ಭಾವುಕವಾಗುತ್ತದೆ. ಭಕ್ತಿಭಾವ ತಾನಾಗೇ ಮೂಡುತ್ತದೆ. ತೀರ್ಥಯಾತ್ರೆ ಎಂಬುದು ನಮ್ಮ ಭವ್ಯ ಭಾರತದ ಸಂಸ್ಕೃತಿ ಹಾಗೂ ಪರಂಪರೆಯ ದ್ಯೋತಕವಾಗಿದೆ. ✽


